# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.

ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010
www.souharda.coop,    Ph: 080-23378375-80,    Email:souharda@souharda.coop

ಸಂಖ್ಯೆ : ಕರಾಸೌಸಂಸನಿ/ಸಿ&ಆಸು/31ಬಿ/2019–20,    ದಿನಾಂಕ:30.03.2020

## ಜಾಗೃತಿ ಸುತ್ತೋಲೆ

ಇವರಿಗೆ :

**ಮಾನ್ಯ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರು**

**ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು**

ಮಾನ್ಯರೇ,

**ವಿಷಯ : ಕೊರೋನಾ ವೈರಸ್ ಜಾಗೃತಿ ಹಾಗೂ ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆ ಕುರಿತು.**

**ಉಲ್ಲೇಖ** : 1. ಸಂಯುಕ್ತ ಸಹಕಾರಿಯ ಪತ್ರ ಸಂಖ್ಯೆ : ಕರಾಸೌಸಂಸ/ಸಿ&ಆಸು/31/2019–20, ದಿನಾಂಕ:13.03.2020

2. ಸಂಯುಕ್ತ ಸಹಕಾರಿಯ ಪತ್ರ ಸಂಖ್ಯೆ:ಕರಾಸೌಸಂಸ/ಸಿ&ಆಸು/31ಎ/2019–20, ದಿನಾಂಕ:23.03.2020

ಕೊರೋನಾ ವೈರಸ್ (COVID-19) ವಿಶ್ವದ 178ಕ್ಕೂ ಹೆಚ್ಚು ದೇಶಗಳನ್ನು ವ್ಯಾಪಿಸಿದ್ದು, ಭಾರತದಲ್ಲೂ ವೇಗವಾಗಿ ಹರಡುತ್ತಿದೆ. ಸರ್ಕಾರವು ರಾಷ್ಟ್ರೀಯ ಹಾಗೂ ಸ್ಥಳೀಯ ಸಾರ್ವಜನಿಕ ಪ್ರಾಧಿಕಾರಗಳ ಮೂಲಕ ವೈರಸ್ ಹರಡದಂತೆ ಅಗತ್ಯ ಕಾರ್ಯವನ್ನು ಕಾಳಜಿಯಿಂದ ನಿರ್ವಹಿಸುತ್ತಿದೆ. ಸಂಪೂರ್ಣ ದೇಶವನ್ನೇ ಆವರಿಸಿರುವ ಆತಂಕದ ಸಂದರ್ಭದಲ್ಲಿ ಸೌಹಾರ್ದ ಸಹಕಾರಿಗಳು ಕೂಡ ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸುವ ಅಗತ್ಯವಿದೆ. ಕೊರೋನಾ ವೈರಸ್ ಸೋಂಕಿನ ಲಕ್ಷಣಗಳು ಹಾಗೂ ಮುಂಜಾಗೃತಾ ಕ್ರಮಗಳ ಕುರಿತಂತೆ ಸಂಯುಕ್ತ ಸಹಕಾರಿ ಈಗಾಗಲೇ ಉಲ್ಲೇಖ 01ರ ಸುತ್ತೋಲೆಯನ್ನು ನೀಡಿದೆ. ಆದಾಗ್ಯೂ ಇನ್ನೊಮ್ಮೆ ಸಂಕ್ಷಿಪ್ತವಾಗಿ ಈ ಮೂಲಕ ನೆನಪಿಸಲಾಗುತ್ತಿದೆ.

- **ಕೊರೋನಾ ವೈರಸ್ ಸೋಂಕಿನ ಲಕ್ಷಣಗಳು** : ಅಧಿಕ ಜ್ವರ, ನಿರಂತರ ಕೆಮ್ಮು, ತಲೆನೋವು, ಮುಖ್ಯವಾಗಿ ಉಸಿರಾಟ ಸಂಬಂಧಿತ ತೊಂದರೆ.

- **ಕೊರೋನಾ ವೈರಸ್ ಹರಡುವ ಬಗೆ** : ಕೊರೋನಾ ವೈರಸ್ ಸೋಂಕಿತ ವ್ಯಕ್ತಿ ಸೀನಿದಾಗ ಅಥವಾ ಕೆಮ್ಮಿದಾಗ ಸಿಡಿಯುವ ತೇವಾಂಶದ ಕಣಗಳ ಸಂಪರ್ಕಕ್ಕೆ ಬರುವ ವ್ಯಕ್ತಿಗಳಿಗೆ ಈ ವೈರಸ್ ಹರಡುತ್ತದೆ.

- **ಮುಂಜಾಗೃತೆ ಕ್ರಮಗಳು** : ಕೈಗಳನ್ನು ಸ್ವಚ್ಛವಾಗಿ ತೊಳೆಯುವುದು, ಹ್ಯಾಂಡ್ ಸ್ಯಾನಿಟೈಸರ್ ಬಳಸುವುದು, ವ್ಯಕ್ತಿ ವ್ಯಕ್ತಿಗಳ ಮಧ್ಯೆ ಅಂತರ ಕಾಪಾಡಿಕೊಳ್ಳುವುದು, ಸೀನುವಾಗ/ಕೆಮ್ಮುವಾಗ ಕರವಸ್ತ್ರ ಬಳಸುವುದು ಅಥವಾ ಮಾಸ್ಕ್ ಧರಿಸುವುದು, ಪದೇ ಪದೇ ಕಣ್ಣು, ಮೂಗು, ಬಾಯಿಗಳನ್ನು ಸ್ಪರ್ಶಿಸುವುದನ್ನು ತಪ್ಪಿಸುವುದು. ಎಲ್ಲಕ್ಕಿಂತ ಮುಖ್ಯವಾಗಿ ಸರ್ಕಾರ ಘೋಷಿಸಿರುವ ಲಾಕ್‌ಡೌನ್ ಅನ್ನು ಕಡ್ಡಾಯವಾಗಿ ಪಾಲಿಸಿ ಮನೆಯಲ್ಲೆ ಇರುವುದು.

ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆ ಬಗ್ಗೆ ಅಗತ್ಯ ಕ್ರಮವಿಡುವಂತೆ ಈಗಾಗಲೇ ಸಂಯುಕ್ತ ಸಹಕಾರಿಯು ಉಲ್ಲೇಖ 02ರ ಪತ್ರದ ಮೂಲಕ ಸೂಚನೆ ನೀಡಿರುತ್ತದೆ. ಆದಾಗ್ಯೂ, ದೇಶವ್ಯಾಪಿ 14 ಏಪ್ರಿಲ್ 2020ರವರೆಗೆ ಲಾಕ್‌ಡೌನ್ ಘೋಷಣೆ ಜಾರಿಯಲ್ಲಿರುವ ಈ ಅವಧಿಯಲ್ಲಿ ಸೌಹಾರ್ದ ಸಹಕಾರಿಗಳು ತಮ್ಮ ಕಾರ್ಯನಿರ್ವಹಣೆಯ ಕುರಿತು ನಿರಂತರವಾಗಿ ಸಂಯುಕ್ತ ಸಹಕಾರಿ ಸಿಬ್ಬಂದಿಗಳನ್ನು ಸಂಪರ್ಕಿಸುತ್ತಿರುವುದನ್ನು ಗಮನಿಸಿ ಈ ಕೆಳಕಂಡ ಅಂಶಗಳನ್ನು ಈ ಮೂಲಕ ತಿಳಿಸಿದೆ.

1. **ಸೌಹಾರ್ದ ಸಹಕಾರಿಗಳ ಕಛೇರಿ ಕಾರ್ಯಚಟುವಟಿಕೆ ಕುರಿತು** :

(1) ಸೌಹಾರ್ದ ಸಹಕಾರ ಸಂಸ್ಥೆಗಳು ತನ್ನ ಸದಸ್ಯರಿಂದ ಠೇವಣಿ ಸಂಗ್ರಹಿಸಿದ್ದು ಹಾಗೂ ಸದಸ್ಯರ ಉಳಿತಾಯ ಖಾತೆಗಳನ್ನು ತಮ್ಮಲ್ಲಿ ಹೊಂದಿರುವುದರಿಂದ, ಠೇವಣಿ ಮರುಪಾವತಿ ಹಾಗೂ ತುರ್ತು ಅಗತ್ಯಕ್ಕನುಗುಣವಾಗಿ ಸದಸ್ಯರ ಉಳಿತಾಯ ಖಾತೆಯ ಹಣವನ್ನು ಮರುಪಾವತಿ ಮಾಡುವ ಕುರಿತು ಸಮರ್ಪಕವಾಗಿ ಸೇವೆ ಒದಗಿಸುವ ನಿಟ್ಟಿನಲ್ಲಿ

ಕಾರ್ಯನಿರ್ವಹಿಸುವುದು ಅವಶ್ಯಕವಾಗಿರುವುದರಿಂದ ಹಾಗೂ ಗ್ರಾಮೀಣ ಭಾಗದಲ್ಲಿ ಹೆಚ್ಚಾಗಿ ವ್ಯಾಪಿಸಿರುವ ಸೌಹಾರ್ದ ಸಹಕಾರಿಗಳು ಸಾಮಾಜಿಕ ಸೇವಾಕಾರ್ಯವನ್ನು ಈ ತುರ್ತುಸಂದರ್ಭದಲ್ಲಿ ಮಾಡುವ ಮೂಲಕ ಸಾಮಾಜಿಕ ಕಾಳಜಿಯನ್ನು ವ್ಯಕ್ತಪಡಿಸುವುದು ಕೂಡ ಅವಶ್ಯಕವಾಗಿರುವುದರಿಂದ ಜಿಲ್ಲಾ ಆಡಳಿತ/ಸ್ಥಳೀಯ ಆಡಳಿತದ ಅನುಮತಿ ಪಡೆದು ಅಗತ್ಯ ಕಾರ್ಯನಿರ್ವಹಣೆ ಮಾಡಬಹುದಾಗಿದೆ.

(2) ಕಂಡಿಕೆ (01) ರನ್ವಯ ಕಾರ್ಯನಿರ್ವಹಣೆಯ ಸಂದರ್ಭದಲ್ಲಿ ಅತ್ಯಂತ ಕಡಿಮೆ ಸಿಬ್ಬಂದಿಗಳ ಹಾಜರಾತಿಯೊಂದಿಗೆ ಕಾರ್ಯನಿರ್ವಹಿಸುವುದು. ಮತ್ತು ಸಿಬ್ಬಂದಿಗಳು ಕಛೇರಿಗೆ ಹಾಜರಾಗುವಾಗ, ಹಿಂತಿರುಗುವಾಗ, ಕಛೇರಿಯಲ್ಲಿ ಕಾರ್ಯನಿರ್ವಹಿಸುವಾಗ ಕೊರೋನಾ ವೈರಸ್ ಹರಡದಂತೆ ವಹಿಸಬೇಕಾದ ಎಲ್ಲ ಜಾಗೃತ ಕ್ರಮಗಳನ್ನು ಅನುಸರಿಸುವಂತೆ ಕ್ರಮವಿಡುವುದು.

(3) ಕಂಡಿಕೆ (01)ರನ್ವಯ ಕಛೇರಿ ತೆರೆಯಲು ಅವಕಾಶವಾಗದ ಹಾಗೂ ತಮ್ಮ ಆಡಳಿತ ಮಂಡಳಿಯಲ್ಲಿ ನಿರ್ಧರಿಸುವ ಮೂಲಕ ಕಛೇರಿಯ ಕಾರ್ಯಚಟುವಟಿಕೆ ಸ್ಥಗಿತಗೊಳಿಸಿರುವ ಸೌಹಾರ್ದ ಸಹಕಾರಿಗಳು – ಆರೋಗ್ಯ ಹಾಗೂ ಜೀವನಾವಶ್ಯಕ ಅನಿವಾರ್ಯತೆಯಿಂದ ತುರ್ತು ಹಣದ ಬೇಡಿಕೆಗಾಗಿ ಸದಸ್ಯರು ಸಂಪರ್ಕಿಸಬಹುದಾದ ಸಂಪರ್ಕ ಸಂಖ್ಯೆಯನ್ನು ತಮ್ಮ ಸಹಕಾರಿಯ/ಸಹಕಾರಿ ಶಾಖೆಯಲ್ಲಿ ಪ್ರದರ್ಶಿಸುವುದು ಹಾಗೂ ಸದಸ್ಯರಿಂದ ಅಂತಹ ಕೋರಿಕೆ ಬಂದ ಸಂದರ್ಭದಲ್ಲಿ ಅವರ ಠೇವಣಿ/ಖಾತೆಯಲ್ಲಿರುವ ಹಣವನ್ನು ಸ್ಥಳೀಯ ಆಡಳಿತದ ಅನುಮತಿಗೊಳಪಟ್ಟು ಸದರಿ ಸದಸ್ಯರಿಗೆ ತಲುಪಿಸಲು ಕ್ರಮವಿಡಬಹುದಾಗಿರುತ್ತದೆ.

**2. 2019–20ನೇ ಸಾಲಿನ ಆರ್ಥಿಕ ವರ್ಷಾಂತ್ಯದ ಕುರಿತು :** ಆರ್ಥಿಕ ಚಟುವಟಿಕೆಗಳು ಸ್ಥಗಿತಗೊಂಡಿರುವ ಕಾರಣದಿಂದಾಗಿ 2019–20ರ ಆರ್ಥಿಕ ವರ್ಷಾಂತ್ಯವನ್ನು ಮುಂದೂಡಬೇಕೆಂಬುದು ಸೌಹಾರ್ದ ಸಹಕಾರಿಗಳ ಅಪೇಕ್ಷೆಯಾಗಿತ್ತು. ಈ ಬಗ್ಗೆ ಸಂಯುಕ್ತ ಸಹಕಾರಿ ಮಾನ್ಯ ಪ್ರಧಾನ ಮಂತ್ರಿಗಳಿಗೆ, ಮಾನ್ಯ ಕೇಂದ್ರ ಹಣಕಾಸು ಸಚಿವರಿಗೆ, ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿರುತ್ತದೆ. ಆದರೆ, ಸಹಕಾರ ಸಂಸ್ಥೆಗಳ ಆರ್ಥಿಕ ವರ್ಷವನ್ನು ಮುಂದೂಡುವ ಬಗ್ಗೆ ರಾಜ್ಯ/ಕೇಂದ್ರ ಸರ್ಕಾರದಿಂದ ಇದುವರೆಗೆ ಸಂಯುಕ್ತ ಸಹಕಾರಿಗೆ ಪ್ರತ್ಯುತ್ತರ ಅಥವಾ ಈ ಕುರಿತು ಯಾವುದೇ ಆದೇಶ ಬಂದಿರುವುದಿಲ್ಲ, ಆದಕಾರಣ 31.03.2020ರಂತೆ ಕೊನೆಗೊಳ್ಳುವ 2019–20ರ ಆರ್ಥಿಕ ವರ್ಷಾಂತ್ಯದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

**3. ಸಾಲದ ಕಂತು ಪಾವತಿ ಕುರಿತು :**

(1) ಅಲ್ಪಾವಧಿ ಹಾಗೂ ದೀರ್ಘಾವಧಿ ಸಾಲದ ಕಂತು ಪಾವತಿಯ ಅವಧಿಯನ್ನು ಆರ್‌ಬಿಐ ಮೂರು ತಿಂಗಳ ಕಾಲ ಮುಂದೂಡಿರುತ್ತದೆ. ಆದರೆ, ಈ ಮುಂದೂಡುವಿಕೆಯು ಪಟ್ಟಣ ಸಹಕಾರ ಬ್ಯಾಂಕುಗಳನ್ನು ಹೊರತುಪಡಿಸಿ ಇನ್ನುಳಿದ ಸೌಹಾರ್ದ ಸಹಕಾರ ಸಂಸ್ಥೆಗಳಿಗೆ ಅನ್ವಯವಾಗುವುದಿಲ್ಲ ಹಾಗೂ ಸೌಹಾರ್ದ ಸಹಕಾರಿಗಳಲ್ಲಿನ ಸಾಲದ ಕಂತು ಪಾವತಿಯನ್ನು ಮುಂದೂಡುವ ಬಗ್ಗೆ ರಾಜ್ಯ ಸರ್ಕಾರ ಕೂಡ ಯಾವುದೇ ಆದೇಶ ಹೊರಡಿಸಿರುವುದಿಲ್ಲ.

(2) ಆದರೆ, ಕೊರೋನಾ ವೈರಸ್‌ನ ಈ ಆತಂಕದ ಹಾಗೂ ಲಾಕ್‌ಡೌನ್ ಸಂದರ್ಭದಲ್ಲಿ ಸೌಹಾರ್ದ ಸಹಕಾರಿಗಳು ಸಾಮಾಜಿಕ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಸಾಲ ವಸೂಲಾತಿಯ ಕುರಿತು ತಮ್ಮ ತಮ್ಮ ಸಹಕಾರಿಯ ಆಡಳಿತ ಮಂಡಳಿಯಲ್ಲಿ ಸೂಕ್ತವಾದ ನಿರ್ಧಾರವನ್ನು ತೆಗೆದುಕೊಳ್ಳಬಹುದಾಗಿದೆ.

ಈ ಮೇಲ್ಕಂಡ ವಿಷಯಗಳನ್ನು ಗಮನಿಸಿ ಸೌಹಾರ್ದ ಸಹಕಾರಿಗಳು ಅಗತ್ಯ ಕಾರ್ಯನಿರ್ವಹಣೆ ಮಾಡುವುದು ಹಾಗೂ ಕೇಂದ್ರ ಸರ್ಕಾರ/ರಾಜ್ಯ ಸರ್ಕಾರ/ಜಿಲ್ಲಾ ಆಡಳಿತ/ಸ್ಥಳೀಯ ಆಡಳಿತಗಳು ಸಂದರ್ಭಾನುಸಾರ ಕಾಲಕಾಲಕ್ಕೆ ಹೊರಡಿಸುವ, ಸೌಹಾರ್ದ ಸಹಕಾರಿಗಳಿಗೆ ಅನ್ವಯವಾಗುವ ನಿರ್ದೇಶನ/ಸುತ್ತೋಲೆ/ಪತ್ರಿಕಾ ಪ್ರಕಟಣೆಗಳನ್ನು ಪಾಲಿಸುವುದು.

ವಂದನೆಗಳೊಂದಿಗೆ,

Karnataka State Souharda Federal Cooperative Ltd. Reg. No. RSR / SOU / ACT / 136 / Regn 051 / 2001-02 dated 04-01-2002 Bangalore

(ಶರಣಗೌಡ ಜಿ. ಪಾಟೀಲ್)
ವ್ಯವಸ್ಥಾಪಕ ನಿರ್ದೇಶಕರು

**ಕೊರೋನಾ ವೈರಸ್ ಹರಡದಂತೆ ಜಾಗೃತಿ ವಹಿಸೋಣ, ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ಭಾಗವಹಿಸೋಣ.**